**ವೈದ್ಯಕೀಯ ಕೋರ್ಸುಗಳ ಪ್ರವೇಶಾತಿಗೆ MOP-UP ROUND ಸೀಟು ಹಂಚಿಕೆ**

1. ಮೊದಲನೇ ಸುತ್ತಿನಲ್ಲಿ (Choice 1 & 2) ಅಥವಾ ಎರಡನೇ ಸುತ್ತಿನಲ್ಲಿ ವೈದ್ಯಕೀಯ ಸೀಟು ಹಂಚಿಕೆಯಾದವರು ಈ **MOP-UP ROUND** ಸುತ್ತಿನಲ್ಲಿ ಭಾಗವಹಿಸಲು ಅರ್ಹರಾಗುವುದಿಲ್ಲ.
2. ಕೆಇಎ ಮುಖಾಂತರ ದಂತವೈದ್ಯಕೀಯ ಸೀಟು ಹಂಚಿಕೆಯಾದವರು ವೈದ್ಯಕೀಯ ಸೀಟು ಹಂಚಿಕೆಗಾಗಿ ಮಾತ್ರ ಭಾಗವಹಿಸಬಹುದು ಆದರೆ ದಂತವೈದ್ಯಕೀಯ ಸೀಟುಗಳನ್ನು ಆಯ್ಕೆ ಮಾಡಿಕೊಳ್ಳಲು ಅರ್ಹರಾಗುವುದಿಲ್ಲ,
3. ಅಖಿಲ ಭಾರತ ಕೋಟದಲ್ಲಿ / ಡೀಮ್ಡ್ ವಿಶ್ವವಿದ್ಯಾಲಯ / ಅಥವಾ ಯಾವುದೇ ಸಂಸ್ಥೆ / ಬೋರ್ಡ್‌ಗಳಿಂದ ಮೊದಲನೇ ಅಥವಾ ಎರಡನೇ ಸುತ್ತಿನಲ್ಲಿ ಯಾವುದೇ ಸೀಟುಗಳಿಗೆ ಹಂಚಿಕೆ – ಪ್ರವೇಶ ಪಡೆದಿದ್ದಲ್ಲಿ ಈ **MOP-UP ROUND** ಸುತ್ತಿನಲ್ಲಿ ಭಾಗವಹಿಸಲು ಅರ್ಹರಾಗುವುದಿಲ್ಲ.
4. ಮೊದಲನೇ ಸುತ್ತಿನಲ್ಲಿ option / choice ಗಳನ್ನು ನೀಡದವರು ಅಥವಾ ಎರಡನೇ ಸುತ್ತಿನಲ್ಲಿ ಯಾವುದೇ option ಗಳನ್ನು ನೀಡದವರು ಈ **MOP-UP ROUND** ಸುತ್ತಿನಲ್ಲಿ ಭಾಗವಹಿಸಲು ಅರ್ಹರಾಗುವುದಿಲ್ಲ.
5. **MOP-UP ROUND** ಸುತ್ತಿಗೆ ನೊಂದಣಿ ಮಾಡಿ ದಾಖಲಾತಿ ಪರಿಶೀಲನೆಯನ್ನು ಪೂರ್ಣಗೊಳಿಸಿರುವವರು ಈ ಸುತ್ತಿನಲ್ಲಿ ಭಾಗವಹಿಸಬಹುದು.
6. ಈಗಾಗಲೇ ನೊಂದಣಿ ಮಾಡಿ ದಾಖಲಾತಿ ಪರಿಶೀಲನೆಯನ್ನು ಪೂರ್ಣಗೊಳಿಸಿರುವ ಅರ್ಹ ಅಭ್ಯರ್ಥಿಗಳು **MOP-UP ROUND** ಸುತ್ತಿನಲ್ಲಿ ಭಾಗವಹಿಸಲು ಆಸಕ್ತಿಯುಳ್ಳ ಅಭ್ಯರ್ಥಿಗಳು ಪ್ರಾಧಿಕಾರದ ವೆಬ್‌ಸೈಟಿನಲ್ಲಿ ದಿನಾಂಕ 17–08–2018 ರಿಂದ 18–08–2018ರವರೆಗೆ ನೊಂದಾಯಿಸಿ, ಪ್ರಾಧಿಕಾರದ ವೆಬ್‌ಸೈಟಿನಿಂದ ಎಂಟ್ರಿಪಾಸ್ ಅನ್ನು ಡೌನ್‌ಲೋಡ್ ಮಾಡಿಕೊಂಡು mop-up ಸುತ್ತಿನಲ್ಲಿ ಭಾಗವಹಿಸುವಾಗ ಎಂಟ್ರಿಪಾಸ್ ಅನ್ನು ತೋರಿಸಬೇಕು.
7. ಅಭ್ಯರ್ಥಿಗಳ ಪೋಟೋವನ್ನು ಎಂಟ್ರಿ ಪಾಸ್ ನಲ್ಲಿ ಮುದ್ರಿಸಲಾಗುವುದು. ಅಭ್ಯರ್ಥಿಗಳ ಜೊತೆಯಲ್ಲಿ ಭಾಗವಹಿಸುವವರ ಫೋಟೋವನ್ನು ಅಪ್‌ಲೋಡ್ ಮಾಡಿ ನಂತರ ಪ್ರಿಂಟ್ ಮಾಡಿಕೊಳ್ಳಬೇಕು.
8. ಎರಡನೇ ಸುತ್ತಿನ ಸೀಟು ಹಂಚಿಕೆಯ ನಂತರ ವಿವಿಧ ಪ್ರವರ್ಗಗಳಲ್ಲಿ ಉಳಿದಿರುವ ವೈದ್ಯಕೀಯ ಮತ್ತು ದಂತವೈದ್ಯಕೀಯ ಸೀಟುಗಳ ವಿವರಗಳನ್ನು ಪ್ರಾಧಿಕಾರದ ವೆಬ್‌ಸೈಟ್ http://kea.kar.nic.in ನಲ್ಲಿ ಪ್ರಕಟಿಸಲಾಗುವುದು.
9. **MOP-UP ROUND** ಪ್ರಕ್ರಿಯೆಯಲ್ಲಿ ಭಾಗವಹಿಸುವ ಮೊದಲು ಸೀಟುಗಳ ಲಭ್ಯತೆಯನ್ನು ನೋಡಿ ಭಾಗವಹಿಸಬಹುದಾಗಿದೆ. ಎರಡನೇ ಸುತ್ತಿನ ಸೀಟು ಹಂಚಿಕೆಯ ನಂತರ ಯಾವುದಾದರು ಸೀಟುಗಳು ರದ್ದುಗೊಂಡರೆ ಅಂತಹ ರದ್ದುಗೊಳ್ಳುವ ಸೀಟುಗಳನ್ನು ಆಯಾ ಪ್ರವರ್ಗದಲ್ಲಿಯೇ ಹಂಚಿಕೆಗೆ ಪರಿಗಣಿಸಲಾಗುವುದು.
10. ವೈದ್ಯಕೀಯ ಸೀಟುಗಳನ್ನು ಆಯಾ ವರ್ಗದ ಅಭ್ಯರ್ಥಿಗಳಿಗೆ ಮಾತ್ರ ಮೊದಲು ಹಂಚಿಕೆ ಮಾಡಲಾಗುವುದು.
11. ಅಭ್ಯರ್ಥಿಗಳು **MOP-UP ROUND ನಲ್ಲಿ ಭಾಗವಹಿಸಲು** ಖುದ್ದಾಗಿ ಹಾಜರಿರಬೇಕು. ಅಂದರೆ, ಅವರ ಪರವಾಗಿ ಬೇರೆ ಯಾರೂ ಹಾಜರಾಗುವಂತಿಲ್ಲ ಅಥವಾ ಅವರ ಪರವಾಗಿ ಬಂದಿರುವ ಯಾರೇ ಪ್ರತಿನಿಧಿಗಳಿಗೆ ಹಾಜರಾಗಲು ಅವಕಾಶ ನೀಡುವುದಿಲ್ಲ. ಅಭ್ಯರ್ಥಿಗಳ ಜೊತೆಯಲ್ಲಿ ಭಾಗವಹಿಸುವವರ (ಪೋಷಕರು / ಹತ್ತಿರದ ಸಂಬಂಧಿಕರು) ವಿವರಗಳು ಎಂಟ್ರಿ ಪಾಸ್ ನಲ್ಲಿ ಇರಬೇಕು.

12. ಅಭ್ಯರ್ಥಿಗಳು ಕಡ್ಡಾಯವಾಗಿ ನಿಗದಿತ ಶುಲ್ಕವನ್ನು ಡಿಮ್ಯಾಂಡ್ ಡ್ರಾಫ್ಟ್ ಮುಖಾಂತರ ಪಾವತಿಸಬೇಕು. ಡಿಮ್ಯಾಂಡ್ ಡ್ರಾಫ್ಟ್ ಅನ್ನು "The Executive Director, KEA" ಇವರ ಹೆಸರಿನಲ್ಲಿ ಬೆಂಗಳೂರಿನಲ್ಲಿ ಸಂದಾಯವಾಗುವಂತೆ ಪಡೆದಿರಬೇಕು. ಅಭ್ಯರ್ಥಿಗಳು ಒಂದಕ್ಕಿಂತ ಹೆಚ್ಚು ಡಿಮ್ಯಾಂಡ್ ಡ್ರಾಫ್ಟ್ ಅನ್ನು ಸಲ್ಲಿಸಬಹುದು. (ಉದಾ: 59,850/– + 49,950/– + 2,00,000/– + 3,85,750/– = 6,95,550/–) ಚೆಕ್ ಮುಖಾಂತರ ಅಥವಾ ನಗದಾಗಿ ಶುಲ್ಕವನ್ನು ಪಾವತಿಸುವಂತಿಲ್ಲ. ಡಿಮ್ಯಾಂಡ್ ಡ್ರಾಫ್ಟ್ ಇಲ್ಲದೇ ಇರುವ ಅಭ್ಯರ್ಥಿಗಳನ್ನು ಸೀಟು ಆಯ್ಕೆ ಮಾಡಲು ಅನುಮತಿಸಲಾಗುವುದಿಲ್ಲ.

13. **MOP-UP ROUND** ಸುತ್ತಿನಲ್ಲಿ ಸೀಟುಗಳು ಮುಗಿದು ಹೋದಲ್ಲಿ ಕೌನ್ಸಿಲಿಂಗ್ ಅನ್ನು ನಿಲ್ಲಿಸಲಾಗುವುದು. **MOP-UP ROUND** ಸುತ್ತಿನಲ್ಲಿ ಭಾಗವಹಿಸುವ ಮೊದಲು ಅಭ್ಯರ್ಥಿಗಳು ಪ್ರಾಧಿಕಾರದ ವೆಬ್‌ಸೈಟಿನಲ್ಲಿ ಸೀಟುಗಳ ಲಭ್ಯತೆಯನ್ನು ನೋಡಲು ಕೋರಿದೆ.

ಆಡಳಿತಾಧಿಕಾರಿ

ದಿನಾಂಕ: 16–08–2018